# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :443
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ :10.12.2025

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಪ್ರಸ್ತುತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಿಗೆ ಸಂಸ್ಥೆಗಳೆಷ್ಟು; ಸದರಿ ಸಾರಿಗೆ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು)</td><td>ಸಾರಿಗೆ ಇಲಾಖೆಯಡಿ ಈ ಕೆಳಕಂಡ 04 ಸಾರಿಗೆ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ:<br><br>1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ<br>2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ<br>3. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ<br>4. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ<br><br>ಸದರಿ 04 ಸಾರಿಗೆ ಸಂಸ್ಥೆಗಳಲ್ಲಿ ಅಕ್ಟೋಬರ್-2025ರ ಅಂತ್ಯಕ್ಕೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವೃಂದವಾರು ವಿವರ ಈ ಕೆಳಕಂಡಂತಿದೆ:<br><br>
<table>
<tr><th rowspan="2">ಸಂಸ್ಥೆ</th><th colspan="4">ಕಾರ್ಯನಿರ್ವಹಣೆ (ವೃಂದವಾರು)</th></tr>
<tr><th>ಎ</th><th>ಬಿ</th><th>ಸಿ</th><th>ಡಿ</th></tr>
<tr><td>ಕ.ರಾ.ರ.ಸಾ.ನಿಗಮ</td><td>161</td><td>201</td><td>40864</td><td>581</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>60</td><td>65</td><td>29102</td><td>100</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>73</td><td>80</td><td>20713</td><td>295</td></tr>
<tr><td>ಕ.ಕ.ರ.ಸಾನಿಗಮ</td><td>87</td><td>84</td><td>18872</td><td>301</td></tr>
<tr><td>ಒಟ್ಟು</td><td>381</td><td>430</td><td>109551</td><td>1277</td></tr>
</table></td></tr>
<tr><td>ಆ.</td><td>2021-22, 2022-23, 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ಎಷ್ಟು ಬಸ್‌ಗಳನ್ನು ಮತ್ತು ಯಾವ ಯಾವ ದರ್ಜೆಯ ಬಸ್‌ಗಳನ್ನು ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ</td><td>ಕ.ರಾ.ರ.ಸಾ.ನಿಗಮ ಮತ್ತು ಬೆಂ.ಮ.ಸಾ.ಸಂಸ್ಥೆ:-<br><br>2021-22 ರಿಂದ 2025-26ನೇ ಸಾಲಿನವರೆಗೆ ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ/ಆಂತರಿಕ ಸಂಪನ್ಮೂಲದಿಂದ ಖರೀದಿಸಿದ ಬಸ್ಸುಗಳ ಮಾಹಿತಿಯನ್ನು ಅನುಬಂಧ"ಅ" ರಲ್ಲಿ ನೀಡಲಾಗಿದೆ.</td></tr>
</table>

ಖರೀದಿಸಿ ವಿತರಿಸಲಾಗಿದೆ; (ಸಾರಿಗೆ ಸಂಸ್ಥೆಗಳವಾರು ಸಂಪೂರ್ಣ ಮಾಹಿತಿ ನೀಡುವುದು)

**ವಾ.ಕ.ರ.ಸಾ.ಸಂಸ್ಥೆ:-**

ವಾಕರಸಾ ಸಂಸ್ಥೆಯಲ್ಲಿ 2021-22 ರಿಂದ 2025-26ನೇ ಸಾಲಿನಲ್ಲಿ ಇಲ್ಲಿಯವರೆಗೆ ಸರ್ಕಾರದ ಅನುದಾನ ಮತ್ತು ಆಂತರಿಕ ಬಂಡವಾಳದಿಂದ ಖರೀದಿಸಿದ ಒಟ್ಟು ಹೊಸ ಬಸ್ಸುಗಳ ವಿವರ ಈ ಕೆಳಗಿನಂತಿವೆ.

| ವರ್ಷ | Moff | City | Non AC Sleeper | AC Sleeper (Ambari Utsav) | Total |
|---|---|---|---|---|---|
| 2021-22 | 00 | 00 | 00 | 00 | 00 |
| 2022-23 | 00 | 00 | 00 | 00 | 00 |
| 2023-24 | 286 | 00 | 10 | 00 | 296 |
| 2024-25 | 433 | 125 | 00 | 02 | 560 |
| 2025-26 | 00 | 11 | 00 | 00 | 11 |
| **ಒಟ್ಟು** | **719** | **136** | **10** | **02** | **867** |

ಹಾಗೂ ಪ್ರಸ್ತುತ 2025-26ನೇ ಸಾಲಿನಲ್ಲಿ ಸರ್ಕಾರದ ಅನುದಾನ ಅಡಿಯಲ್ಲಿ ಹಂಚಿಕೆಯಾದ 300 ಹೊಸ ಬಸ್ಸುಗಳ ಟೆಂಡರ್ ಆಹ್ವಾನಿಸಲಾಗಿದ್ದು ಮಾರ್ಚ್-2026 ರೊಳಗಾಗಿ ಸೇರ್ಪಡೆಗೊಳಿಸಲಾಗುವುದು

**ಕ.ಕ.ರ.ಸಾ.ನಿಗಮ:-**

ಸಂಸ್ಥೆಯಲ್ಲಿ -2021-22 ರಿಂದ 2025-26 ರ ನೇ ಸಾಲಿನಲ್ಲಿ ಇಲ್ಲಿಯವರೆಗೆ ಸರ್ಕಾರದ ಅನುದಾನ ಮತ್ತು ಆಂತರಿಕ ಬಂಡವಾಳದಿಂದ ಖರೀದಿಸಿದ ಒಟ್ಟು ಬಸ್ಸುಗಳ ವಿವರ ಈ ಕೆಳಗಿನಂತಿವೆ

| **ವರ್ಷ** | **Moff** | **Cit** | **Non A( Sleeper** | **AC Sleeper (Ambari Utsav)** | **Volvo AC Sleepe** | **Tota** |
|---|---|---|---|---|---|---|
| 2021-22 | 0 | 0 | 0 | 0 | 0 | 0 |
| 2022-23 | 0 | 0 | 0 | 0 | 0 | 0 |
| 2023-24 | 682 | 0 | 30 | 2 | 6 | 720 |
| 2024-25 | 303 | 0 | 2 | 2 | 0 | 307 |
| 2025-26 | 0 | 90 | 4 | 0 | 0 | 94 |
| **ಒಟ್ಟು** | **985** | **90** | **36** | **4** | **6** | **112** |

| | | |
|---|---|---|
| ಇ. | ವಾಯುವ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಎಷ್ಟು ಬಸ್‌ಗಳಿವೆ; ಅದರಲ್ಲಿ 10 ವರ್ಷಗಳಷ್ಟು ಹಳೆಯದಾದ ಬಸ್‌ಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು 5289 ಬಸ್ಸುಗಳು ಇದ್ದು, ಅವುಗಳಲ್ಲಿ 10 ವರ್ಷ ಮೇಲ್ಪಟ್ಟ 2288 ಬಸ್ಸುಗಳು ಇರುತ್ತವೆ.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಒಟ್ಟು 4929 ಬಸ್ಸುಗಳು ಇದ್ದು, ಅವುಗಳಲ್ಲಿ 2052 ಬಸ್ಸುಗಳು 10 ವರ್ಷಗಳ ಅವಧಿ ಮೀರಿದ್ದರೂ ಸಹ ಸುಸ್ಥಿತಿಯಲ್ಲಿರುತ್ತವೆ.<br><br>ಕ.ರಾ.ರ.ಸಾ.ನಿಗಮದ ಸುತ್ತೋಲೆ ಸಂಖ್ಯೆ 810/2023 ದಿನಾಂಕ:23.09.2023 ರನ್ವಯ ಸಂಸ್ಥೆಯಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು **ಅನುಬಂಧ-ಔ ರಲ್ಲಿ** ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ. ಅಲ್ಲದೇ ಸರ್ಕಾರದ ಅಧಿಸೂಚನೆಯಂತೆ 15 ವರ್ಷ ಪೂರ್ಣಗೊಂಡ ವಾಹನಗಳನ್ನು ನಿರುಪಯುಕ್ತಗೊಳಿಸಲಾಗುತ್ತಿದೆ.<br><br>ಸಾಮಾನ್ಯ ವಾಹನಗಳನ್ನು ನಿಷ್ಕ್ರಿಯೆಗೊಳಿಸಲು ನಿಗದಿಪಡಿಸಿರುವ 11 ಲಕ್ಷ ಕಿ.ಮೀ ಕ್ರಮಿಸಿರುವ ಬಸ್‌ಗಳನ್ನು ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಕಾರಣ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ವಾಹನಗಳನ್ನು ಕಾರ್ಯಾಚರಣೆಗಳಿಸಲಾಗುತ್ತಿದೆ.<br><br>ಆದಾಗ್ಯೂ ಪ್ರತಿ ವರ್ಷ ಸಂಸ್ಥೆಯ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿರವರಲ್ಲಿ ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ. |

| | | |
|---|---|---|
| ಈ. | ಉತ್ತರ ಕರ್ನಾಟಕಕ್ಕೆ ಹೊಸ ಬಸ್‌ಗಳನ್ನು ನೀಡದೇ ಹಳೆಯ ಬಸ್‌ಗಳನ್ನು ನೀಡಲಾಗಿದ್ದು, ಈ ಬಸ್‌ಗಳು ರಸ್ತೆಯಲ್ಲಿ ಕೆಟ್ಟು ನಿಲ್ಲುವ, ಅಪಘಾತ, ರಿಪೇರಿ ಇತ್ಯಾದಿ ಗಳಿಂದ ಸಾರ್ವಜನಿಕ ರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು; | **ರಾಜ್ಯದ ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಆಯಾ ನಿಗಮದ ಹಂತದಲ್ಲೇ ಬಸ್ಸುಗಳನ್ನು ಕೊಳ್ಳಲು ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಆದ್ದರಿಂದ ಒಂದು ನಿಗಮದಿಂದ ಇನ್ನೊಂದು ನಿಗಮ/ಸಂಸ್ಥೆಗೆ ಬಸ್ಸುಗಳನ್ನು ಹಂಚಿಕೆ ಮಾಡುವ ವ್ಯವಸ್ಥೆ ಪ್ರಸ್ತುತ ಇರುವುದಿಲ್ಲ.**<br>ಆದರೆ 2022 ರಲ್ಲಿ ಮಾತ್ರ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಕಾರ್ಯಾಚರಣೆಗೆ ಯೋಗ್ಯವಾಗಿರುವ ಒಟ್ಟು 100 ಬಸ್ಸುಗಳನ್ನು ನೀಡಲಾಗಿದ್ದು, ಪ್ರಸ್ತುತ ಸದರಿ ಎಲ್ಲಾ 100 ವಾಹನಗಳು (2023-24 ನೇ ಸಾಲಿನಲ್ಲಿ 68 ಹಾಗೂ 2024-25ನೇ ಸಾಲಿನಲ್ಲಿ 32) ನಿಷ್ಕ್ರಿಯಗೊಂಡಿರುತ್ತವೆ.<br><br>ಉತ್ತರ ಕರ್ನಾಟಕದಲ್ಲಿ ಹಳೆಯ ಬಸ್ಸುಗಳ ರಿಪೇರಿ ಇತ್ಯಾದಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಸಂಸ್ಥೆಯಲ್ಲಿ 2023-24ರಿಂದ ಇಲ್ಲಿಯವರೆಗೆ ಒಟ್ಟು 867 ಹೊಸ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಉಳಿದ ಬಸ್ಸುಗಳನ್ನು ಪ್ರತಿ ವರ್ಷ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ರಹದಾರಿ ನವೀಕರಣ ಮಾಡಿ ಕಾರ್ಯಾಚರಣೆ ಮಾಡಲಾಗುತ್ತಿದೆ. ರಿಪೇರಿಗೆ ಬಂದ ವಾಹನಗಳನ್ನು ಪ್ರತಿ ದಿನ ನಿರ್ವಹಣೆ ಮಾಡಿ ಮಾರ್ಗದ ಮೇಲೆ ಕಳುಹಿಸಲಾಗುತ್ತಿದೆ. ಅನಿವಾರ್ಯವಾಗಿ ಅಪಘಾತ/ ಅವಘಡವಾದ ಸಂದರ್ಭದಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಅನಾನುಕೂಲವಾಗದಂತೆ ಪರ್ಯಾಯ ವ್ಯವಸ್ಥೆಯನ್ನು ಮಾಡಿ ವಾಹನಗಳನ್ನು ದುರಸ್ಥಿಗೊಳಿಸಲಾಗುತ್ತಿದೆ.<br><br>ಇದಲ್ಲದೇ 2025-26ನೇ ಸಾಲಿನಲ್ಲಿ 474 ಹೊಸ ಬಸ್ಸುಗಳನ್ನು ಖರೀದಿಸುವ ಯೋಜನೆ ಇದ್ದು, 2023-2024 ರಿಂದ ಇಲ್ಲಿಯವರೆಗೆ ಒಟ್ಟು 210 ಹಳೆಯ ಬಸ್ಸುಗಳನ್ನು ಪುನಶ್ಚೇತನಗೊಳಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. |

| | | |
|---|---|---|
| ಉ | ವಾಯುವ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳಲ್ಲಿ. ಯಾವ ಯಾವ ದರ್ಜೆಯ ಎಷ್ಟು ಬಸ್‌ಗಳು ಕಾರ್ಯನಿರ್ವಹಿಸುತ್ತಿವೆ; (ಬಸ್ ಗಳ ಸಂಪೂರ್ಣ ಮಾಹಿತಿ ನೀಡುವುದು) | ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ 5289 ಬಸ್‌ಗಳು ಕಾರ್ಯಾಚರಣೆಯಲ್ಲಿದ್ದು, ದರ್ಜೆವಾರು (ಮಾದರಿವಾರು) ಬಸ್ಸುಗಳ ವಿವರ ಈ ಕೆಳಗಿನಂತಿದೆ. |

| ಕ್ರ. ಸ | ಬಸ್ಸುಗಳ ಮಾದರಿ | ಬಸ್ಸುಗಳ ಸಂಖ್ಯೆ |
|---|---|---|
| 1 | ಗ್ರಾಮಾಂತರ ಸಾರಿಗೆ (ಸಿಂಗಲ್ ಡೋರ್) | 3552 |
| 2 | ನಗರ & ಉಪನಗರ ಸಾರಿಗೆ (ಡಬಲ್ ಡೋರ್) | 1166 |
| 3 | ಮಿಡಿ ಬಸ್ಸುಗಳು | 280 |
| 4 | ವೋಲ್ವೋ ಯುಡಿ | 100 |
| 5 | ರಾಜಹಂಸ | 62 |
| 6 | ನಾನ್ ಎಸಿ ಸ್ಲೀಪರ್ | 68 |
| 7 | ಎಸಿ ಸ್ಲೀಪರ್ | 25 |
| 8 | ವೋಲ್ವೋ ಮಲ್ಟಿ ಆಕ್ಸಲ್ ಸೀಟರ್ | 34 |
| 9 | ವೋಲ್ವೋ ಮಲ್ಟಿ ಆಕ್ಸಲ್ ಸ್ಲೀಪರ್ (ಅಂಬಾರಿ ಉತ್ಸವ) | 2 |
| | **ಒಟ್ಟು** | **5289** |

ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದಲ್ಲಿ 4929 ವಿವಿಧ ಮಾದರಿಯ ಬಸ್ಸುಗಳು ಕಾರ್ಯ ನಿರ್ವಹಿಸುತ್ತಿದ್ದು ದರ್ಜೆವಾರು (ಮಾದರಿವಾರು) ಬಸ್ಸುಗಳ ವಿವರ ಈ ಕೆಳಗಿನಂತಿದೆ:-

| ಕ್ರ. ಸ | ಬಸ್ಸುಗಳ ಮಾದರಿ | ಬಸ್ಸುಗಳ ಸಂಖ್ಯೆ |
|---|---|---|
| 1 | ವೋಲ್ವೋ ಎ.ಸಿ.ಸ್ಲೀಪರ್ | 06 |
| 2 | ಎ.ಸಿ.ಸ್ಲೀಪರ್ | 17 |
| 3 | ನಾನ್ ಎ.ಸಿ.ಸ್ಲೀಪರ್ | 130 |
| 4 | ರಾಜಹಂಸ | 90 |
| 5 | ವೇಗದೂತ | 4139 |
| 6 | ನಗರ ಸಾರಿಗೆ | 547 |
| | **ಒಟ್ಟು** | **4929** |

| | | |
|---|---|---|
| ಊ | ವಾಯುವ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳಲ್ಲಿ ವೋಲ್ವೋ ಮತ್ತು ಅತ್ಯುನ್ನತ ದರ್ಜೆಯ ಬಸ್‌ಗಳು ಏಕೆ ಕಾರ್ಯ ನಿರ್ವಹಿಸುತ್ತಿಲ್ಲ; ಉತ್ತರ ಕರ್ನಾಟಕದ ಎಷ್ಟು ಹಳ್ಳಿಗಳಿಗೆ ಬಸ್ ಸಂಪರ್ಕವಿಲ್ಲ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು 36 ವೋಲ್ವೋ ಬಸ್‌ಗಳು ಕಾರ್ಯಾಚರಣೆಯಲ್ಲಿರುತ್ತವೆ. ಪ್ರಸ್ತುತ ಸಂಸ್ಥೆಯ ವ್ಯಾಪ್ತಿಗೆ ಒಳಪಡುವ 6 ಕಂದಾಯ ಜಿಲ್ಲೆಗಳ ಒಟ್ಟು 4610 ಹಳ್ಳಿಗಳ ಪೈಕಿ, ಈವರೆಗೆ 4565 ಹಳ್ಳಿಗಳಿಗೆ ಸಾರಿಗೆ ಸೇವೆ ಕಲ್ಪಿಸಲಾಗಿದ್ದು, ಇನ್ನುಳಿದ 45 ಹಳ್ಳಿಗಳಿಗೆ ಬಸ್ ಸಂಚಾರ ಯೋಗ್ಯ ರಸ್ತೆ ಸಂಪರ್ಕ ಇಲ್ಲದೇ ಇರುವುದರಿಂದ ನೇರ ಸಾರಿಗೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಅಂತಹ ಹಳ್ಳಿಗಳಿಗೆ ಬಸ್ ಸಂಚಾರ ಯೋಗ್ಯ ರಸ್ತೆ ಇರುವ ಹಳ್ಳಿಗಳವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಬಸ್ ಸಂಚಾರ ಯೋಗ್ಯ ರಸ್ತೆ ನಿರ್ಮಾಣವಾದ ನಂತರ ಸಾರ್ವಜನಿಕ ಬೇಡಿಕೆ/ಅವಶ್ಯಕತೆಯನ್ನು ಪರಿಶೀಲಿಸಿ ಸದರಿ ಹಳ್ಳಿಗಳಿಗೂ ಸಾರಿಗೆ ಸೌಲಭ್ಯ ಒದಗಿಸಲು ಪರಿಶೀಲಿಸಲಾಗುವುದು.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 06 ವೋಲ್ವೋ ಬಸ್ಸುಗಳು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಪ್ರಸ್ತುತ ನಿಗಮದ ಒಟ್ಟು 5283 ಜನವಸತಿ ಗ್ರಾಮಗಳ ಪೈಕಿ 5237 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಉಳಿದ 46 ಗ್ರಾಮಗಳಿಗೆ ಭಾರೀ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆ ಇಲ್ಲದ ಕಾರಣ ಸಾರಿಗೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ವಾಹನಗಳ ಸಂಚಾರಕ್ಕೆ ಯೋಗ್ಯ ರಸ್ತೆ ಇಲ್ಲದಿರುವ ಗ್ರಾಮಗಳ ರಸ್ತೆ ದುರಸ್ಥಿಪಡಿಸಲು ಕೋರಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರವರಿಗೆ ಹಾಗೂ ಸ್ಥಳೀಯ ಶಾಸಕರಿಗೆ ಪತ್ರ ಬರೆಯಲಾಗಿದೆ. ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ನಿರ್ಮಾಣವಾದ ನಂತರ ಸಾರ್ವಜನಿಕ ಬೇಡಿಕೆ/ಅವಶ್ಯಕತೆಯನ್ನು ಪರಿಶೀಲಿಸಿ ಸದರಿ ಹಳ್ಳಿಗಳಿಗೂ ಸಾರಿಗೆ ಸೌಲಭ್ಯ ಒದಗಿಸಲು ಪರಿಶೀಲಿಸಲಾಗುವುದು. ಅಲ್ಲಿಯವರೆಗೆ ಸದರಿ ಗ್ರಾಮಗಳ ಸಮೀಪದವರೆಗೂ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. |

ಸಂಖ್ಯೆ: ಟಿಡಿ 211 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ "ಅ"

| ವರ್ಷ | ಡೀಸೆಲ್ ವಾಹನಗಳು | | | ಎಲೆಕ್ಟ್ರಿಕ್ (ಜಿಸಿಸಿ) | | | ಒಟ್ಟು |
|---|---|---|---|---|---|---|---|
| | ಸರಬರಾಜಾದ ವಾಹನಗಳು | ಯೋಜನೆ ರಾಜ್ಯ/ ಕೇಂದ್ರ ಸರ್ಕಾರ | ದರ್ಜೆ | ಸರಬರಾಜಾದ ವಾಹನಗಳು | ಯೋಜನೆ ರಾಜ್ಯ/ ಕೇಂದ್ರ ಸರ್ಕಾರ | ದರ್ಜೆ | |
| 2021-22 | 565 | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 60 | ರಾಜ್ಯ ಸರ್ಕಾರ | ಹವಾ ನಿಯಂತ್ರಣ ರಹಿತ | 625 |
| 2022-23 | 238 | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 30 | ರಾಜ್ಯ ಸರ್ಕಾರ | ಹವಾ ನಿಯಂತ್ರಣ ರಹಿತ | 448 |
| | | | | 180 | ಕೇಂದ್ರ & ರಾಜ್ಯ ಸರ್ಕಾರ | ಹವಾ ನಿಯಂತ್ರಣ ರಹಿತ | |
| 2023-24 | 20 | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 120 | ಕೇಂದ್ರ & ರಾಜ್ಯ ಸರ್ಕಾರ | ಹವಾ ನಿಯಂತ್ರಣ ರಹಿತ | 345 |
| | | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 205 | ಕೇಂದ್ರ ಸರ್ಕಾರ | ಹವಾ ನಿಯಂತ್ರಣ ರಹಿತ | |
| 2024-25 | 820 | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 716 | ಕೇಂದ್ರ ಸರ್ಕಾರ | ಹವಾ ನಿಯಂತ್ರಣ ರಹಿತ | 1575 |
| | | | | 39 | ರಾಜ್ಯ ಸರ್ಕಾರ | ಹವಾ ನಿಯಂತ್ರಿತ | |
| 2025-26 (ಇಲ್ಲಿಯ ವರೆಗೆ) | 0 | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 113 | ರಾಜ್ಯ ಸರ್ಕಾರ | ಹವಾ ನಿಯಂತ್ರಣ ರಹಿತ | 113 |
| | 0 | ರಾಜ್ಯ ಸರ್ಕಾರ | ಸಾಮಾನ್ಯ ವಾಹನಗಳು | 227 | ರಾಜ್ಯ ಸರ್ಕಾರ | ಹವಾ ನಿಯಂತ್ರಿತ | 227 |
| **ಒಟ್ಟು** | **1643** | | | **1690** | | | **3333** |

**ಮುಖ್ಯ ಸಂಚಾರ ವ್ಯವಸ್ಥಾಪಕರು (ಅ)**

**ಬೆಂ.ಮ.ಸಾ.ಸಂಸ್ಥೆ**

ಅನುಬಂಧ 'ಅ'

| ಮಾನ್ಯ ಶ್ರೀ. ನಿರಾಣಿ ಹನುಮಂತ ರುದ್ರಪ್ಪ (ವಿಧಾನ ಸಭಾ ಕ್ಷೇತ್ರ) ವಿಧಾನ ಪರಿಷತ್ತಿನ ಸದಸ್ಯರು ರವರ ಪ್ರಶ್ನೆ ಸಂಖ್ಯೆ : 340(443) ಕ್ಕೆ ಉತ್ತರ. | | | | | | | | | | | |
|---|---|---|---|---|---|---|---|---|---|---|---|
| ಕ.ರಾ.ರ.ಸಾ.ನಿಗಮದಲ್ಲಿ 2021-22 ಸಾಲಿನಿಂದ 2025-26ನೇ ಸಾಲಿನ ರವರೆಗೆ ಖರೀದಿಸಿರುವ ಹೊಸ ಬಸ್ಸುಗಳ ವಿವರ | | | | | | | | | | | |
| ವರ್ಷ | ಕರ್ನಾಟಕ ಸಾರಿಗೆ | ಕರ್ನಾಟಕ ಸಾರಿಗೆ (ಅಶ್ವಮೇಧ ಕ್ಲಾಸಿಕ್) | ನಗರ ಸಾರಿಗೆ | ರಾಜ ಹಂಸ | ನಾನ್ ಎಸಿ ಸ್ಲೀಪರ್ (ಪಲ್ಲಕ್ಕಿ) | 13.5 ಮೀ ನಾನ್ ಎಸಿ ಸ್ಲೀಪರ್ | 13.5 ಮೀ ಎಸಿ ಸ್ಲೀಪರ್ | ವೋಲ್ವೋ ಐರಾವತ 2.0 | ವೋಲ್ವೋ ಅಂಬಾರಿ ಉತ್ಸವ | e-Buses on GCC | ಒಟ್ಟು |
| 2021-22 | 1 | 0 | 0 | 0 | 0 | 0 | 0 | 0 | 0 | 0 | 1 |
| 2022-23 | 0 | 0 | 0 | 0 | 0 | 0 | 0 | 0 | 20 | 27 | **47** |
| 2023-24 | 130 | 257 | 5 | 0 | 40 | 4 | 4 | 0 | 0 | 23 | **463** |
| 2024-25 | 110 | 503 | 45 | 0 | 0 | 0 | 0 | 20 | 20 | 0 | **698** |
| 2025-26 (ನವೆಂಬರ್-25 ಅಂತ್ಯದವರೆಗೆ | 0 | 0 | 0 | 0 | 70 | 0 | 0 | 5 | 5 | 0 | **80** |
| ಒಟ್ಟು | **241** | **760** | **50** | **0** | **110** | **4** | **4** | **25** | **45** | **50** | **1289** |

10/12

ಮುಖ್ಯ ಯಾಂತ್ರಿಕ ಅಭಿಯಂ[illegible]
ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ
**ಬೆಂಗಳೂರು - 560027.**

ಅನುಬಂಧ - ೪



**ಕರ್ನಾಟಕ ರಾಜ್ಯ ಸಾರಿಗೆ ನಿಗಮ: ಕೇಂದ್ರ ಕಛೇರಿ: ಯಾಂತ್ರಿಕ ಶಾಖೆ: ಬೆಂಗಳೂರು**

ಸಂಖ್ಯೆ/ಕರಾಸಾ/ಕೇಕ/ಯಾಂ./ಸ.ಕಾ.ಅ./910/2023-24 ದಿನಾಂಕ: 23-09-2023

**ಸುತ್ತೋಲೆ ಸಂಖ್ಯೆ:810: 2023**

**ವಿಷಯ: ವಾಹನಗಳನ್ನು ಮತ್ತು ಪ್ರಮುಖ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸುವ ಕಿ.ಮೀ.ಗಳನ್ನು ಪರಿಷ್ಕರಿಸಿ, ನಿಗಧಿಪಡಿಸಿರುವ ಬಗ್ಗೆ.**

**ಉಲ್ಲೇಖ:** 1. ಸುತ್ತೋಲೆ ಸಂಖ್ಯೆ: 235 ದಿನಾಂಕ: 17.02.1988
2. ಸುತ್ತೋಲೆ ಸಂಖ್ಯೆ: 678 : ದಿನಾಂಕ: 18.03.2010
3. ಸುತ್ತೋಲೆ ಸಂಖ್ಯೆ: 708 : ದಿನಾಂಕ: 19.07.2012
4. ಸುತ್ತೋಲೆ ಸಂಖ್ಯೆ: 716 : ದಿನಾಂಕ: 05.07.2013
5. ಸುತ್ತೋಲೆ ಸಂಖ್ಯೆ: 740 : ದಿನಾಂಕ: 22.07.2014
6. ಸುತ್ತೋಲೆ ಸಂಖ್ಯೆ: 774 : ದಿನಾಂಕ: 25.09.2017
7. ಕೇಂ.ಸರ್ಕಾರದ ಅಧಿಸೂಚನೆ ಸಂ:GSR.29(E) Dated:16.01.2023.
8. ದಿನಾಂಕ 24.07.2023 ರಂದು ಕೇಂ.ಕಛೇರಿಯಲ್ಲಿ ಸುತ್ತೋಲೆ ಸಂಖ್ಯೆ-235/1988 ಅನ್ನು ಪರಿಷ್ಕರಿಸುವ ಕುರಿತಾದ ಸಭೆಯ ನಡಾವಳಿ.
**9. ಮಂಡಳ ಠರಾವು ಸಂಖ್ಯೆ:10377 ದಿನಾಂಕ: 14.09.2023.**

******

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 15 ವಿಭಾಗಗಳ ಮೂಲಕ 83 ಘಟಕಗಳಿಂದ 7492 ಅನುಸೂಚಿಗಳನ್ನು ಲೇಲ್ಯಾಂಡ್, ಟಾಟಾ ಮತ್ತು ಐಷರ್ ತಯಾರಿಕೆಯ ಸಾಮಾನ್ಯ, ರಾಜಹಂಸ, ನಾನ್ ಎ.ಸಿ.ಸ್ಲೀಪರ್ ವಾಹನಗಳಿಂದ ಮತ್ತು ಪ್ರತಿಷ್ಠಿತ ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ, ಮರ್ಸಿಡೀಸ್ ಬೆಂಜ್ ಮತ್ತು ಕರೋನಾ ತಯಾರಿಕೆಯ ಸೀಟರ್ ಮತ್ತು ಸ್ಲೀಪರ್ ವಾಹನಗಳು ಸೇರಿ ಒಟ್ಟು 8132 ವಾಹನಗಳ ಬಲದಿಂದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ/ಮಿತವ್ಯಯ ಮತ್ತು ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸುತ್ತಿದೆ.

ನಿಗಮದ ಮೇಲ್ಕಂಡ ಸುತ್ತೋಲೆಗಳಲ್ಲಿ ಸದರಿ ವಾಹನಗಳು ಮತ್ತು ಅಸೆಂಬ್ಲಿಗಳು ಕಾರ್ಯಚರಿಸಿದ ಕಿ.ಮೀ.ಗಳ ಆಧಾರದ ಮೇಲೆ ಮತ್ತು ಭೌತಿಕ ಹಾಗೂ ತಾಂತ್ರಿಕ ಸ್ಥಿತಿಯ ಸಾಮರ್ಥ್ಯವನ್ನು ಪರಿಗಣಿಸಿ, ವಾಹನಗಳನ್ನು ಮತ್ತು ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸಲಾಗುವ ಕಿ.ಮೀ.ಗಳನ್ನು ಅಗಾಗ್ಗೆ ಪರಿಷ್ಕರಿಸಿ/ ವೃದ್ಧಿಸಲಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನವೀನ ಮಾದರಿ/ ತಾಂತ್ರಿಕತೆಯ ವಾಹನಗಳು ಸೇರ್ಪಡೆ ಆಗುತ್ತಿದ್ದು, ಅದಕ್ಕೆ ಸಮಾನಾಂತರವಾಗಿ ಅತ್ಯುತ್ತಮ ಗುಣಮಟ್ಟದಲ್ಲಿ ಕವಚ ನಿರ್ಮಾಣ/ ಹೆ.ಕವಚ ದುರಸ್ಥಿ ಮತ್ತು **ಕವಚ ಮನಶ್ಚೇತನ (Refurbishing)** ಕಾರ್ಯವನ್ನು ಮಾಡುತ್ತಿರುವುದಲ್ಲದೇ, ಗುಣಮಟ್ಟದ ಬಿಡಿಭಾಗಗಳು ಆಯಿಲ್, ಕೂಲೆಂಟ್, ಗ್ರೀಸ್ ಸರಬರಾಜು ಮಾಡುತ್ತಿದ್ದು, ವಾಹನಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಹಾಗೂ ರಸ್ತೆಗಳ ಗುಣಮಟ್ಟವು ಸಹ ಸುಧಾರಣೆಗೊಂಡಿರುವುದರಿಂದ ವಾಹನಗಳು ಮೇಲ್ಕಂಡ ಸುತ್ತೋಲೆಗಳಂತೆ ನಿಗಧಿತ ನಿರುಪಯುಕ್ತ ಕಿ.ಮೀ. ಕ್ರಮಿಸಿದ ನಂತರವು ಕವಚ ಮತ್ತು ಅಸೆಂಬ್ಲಿಗಳು ಸುಸ್ಥಿತಿಯಲ್ಲಿ ಇರುತ್ತದೆ.

ಸಾಮಾನ್ಯ ವಾಹನಗಳನ್ನು ನಿರುಪಯುಕ್ತಗೊಳಿಸಲು ನಿಗಧಿಪಡಿಸಿರುವ 9.00 ಲಕ್ಷ ಕಿ.ಮೀ. ಕ್ರಮಿಸಿರುವ 4327 ವಾಹನಗಳು (57 %) ಮತ್ತು ಪ್ರತಿಷ್ಠಿತ ವೋಲ್ವೋ ವಾಹನಗಳನ್ನು ನಿರುಪಯುಕ್ತಗೊಳಿಸಲು ನಿಗದಿಪಡಿಸಿರುವ 13.00 ಲಕ್ಷ ಕಿ.ಮೀಟರ್ ಕ್ರಮಿಸಿರುವ 174 (46%) ವಾಹನಗಳು ಇದ್ದು, ಜುಲೈ 2023 ರಂತೆ 7550 ಸಾಮಾನ್ಯ ವಾಹನಗಳು ಸರಾಸರಿ 10.72 ಲಕ್ಷ ಕಿ.ಮೀ. ಮತ್ತು 503 ಹವಾನಿಯಂತ್ರಿತ ವಾಹನಗಳು ಸರಾಸರಿ 11.49 ಲಕ್ಷ ಕಿ.ಮೀ. ಕ್ರಮಿಸಿ, ಸುಸ್ಥಿತಿಯಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಪ್ರಯುಕ್ತ ವಾಹನಗಳ ಮತ್ತು ಅಸೆಂಬ್ಲಿಗಳ ಜೀವಮಾನ ಕಿ.ಮೀ.ಅನ್ನು ಪರಿಷ್ಕರಿಸಿ, ವೃದ್ಧಿಸುವುದು ನಿಗಮದ ಆರ್ಥಿಕ ಸ್ಥಿತಿಯ ಹಿತದೃಷ್ಟಿಯಿಂದ ಸಹ ಅತಿ ಅವಶ್ಯವಿರುತ್ತದೆ.

ಪ್ರಸ್ತುತ ವಾಹನಗಳನ್ನು ಮತ್ತು ಪ್ರಮುಖ ಅಸೆಂಬ್ಲಿಗಳ ನಿರುಪಯುಕ್ತ ಕಿ.ಮೀ. ವೃದ್ಧಿಸಲು ಪ್ರಮುಖ ಕಾರಣಗಳು ಈ ಕೆಳಕಂಡಂತಿದೆ.

a) ಕಳೆದ 2-3 ವರ್ಷಗಳಿಂದ ನಿಗಮಕ್ಕೆ ನಿಗದಿತ ಪ್ರಮಾಣದ ಹೊಸ ವಾಹನಗಳು ಸೇರ್ಪಡೆಯಾಗಿರುವುದಿಲ್ಲ.

b) ಪ್ರಸ್ತುತ ಸುತ್ತೋಲೆಗಳಂತೆ, ವಾಹನಗಳು ನಿಗದಿತ ಕಿ.ಮೀಟರ್ ಕ್ರಮಿಸಿದ್ದರೂ ಸಹ ವಾಹನಗಳ ಕೊರತೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳನ್ನು ನಿರುಪಯುಕ್ತಗೊಳಿಸಿರುವುದಿಲ್ಲ.

c) ಆಧುನಿಕ ನಿರ್ವಹಣಾ ಕ್ರಮಗಳಿಂದ ವಾಹನಗಳ ತಾಂತ್ರಿಕ ಸ್ಥಿತಿ ಹಾಗೂ ಕವಚ ನಿರ್ಮಾಣದ ಗುಣಮಟ್ಟವು ಉತ್ತಮಗೊಂಡಿರುತ್ತದೆ.

d) ನೂತನ ಯೋಜನೆಯಾದ **ಕವಚ ಪುನಶ್ಚೇತನ(Refurbishing) ರಡಿ** 10.00 ಲಕ್ಷ ಕಿ.ಮೀ.ಗಿಂತ ಹೆಚ್ಚು ಕ್ರಮಿಸಿರುವ ಹಾಗೂ 10 ವರ್ಷ ವಯೋಮಾನ ಪೂರೈಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಕವಚ ದುಸ್ಥಿತಿಯಲ್ಲಿರುವ ಸಾಮಾನ್ಯ ವಾಹನಗಳಿಗೆ ಕವಚ ಪುನಶ್ಚೇತನ (Refurbishing) ಕಾರ್ಯವನ್ನು ನಿರ್ವಹಿಸುತ್ತಿದ್ದು, ಇದರಿಂದ ವಾಹನಗಳ ಜೀವಿತಾವಧಿ ವಿಸ್ತರಣೆಗೊಂಡಿರುತ್ತದೆ.

e) ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: G.S.R. 29 (ಇ) ದಿನಾಂಕ 16.01.2023 ರ ಆದೇಶದಂತೆ ದಿನಾಂಕ 01.04.2023 ರಿಂದ ಜಾರಿಗೆ ಬರುವಂತೆ 15 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯೋಮಾನದ ಸರ್ಕಾರಿ ಸ್ವಾಮ್ಯದ ವಾಹನಗಳ ನೋಂದಣಿ ಪತ್ರಗಳು ಸ್ವಯಂ ಆಗಿ ರದ್ದತಿಯಾಗುತ್ತಿರುತ್ತದೆ. ವಾಹನಗಳ ಉಪಯುಕ್ತತೆ ಒಂದು ದಿನಕ್ಕೆ ಸರಾಸರಿ 368 ಕಿ.ಮೀ.ಇದ್ದು 15 ವರ್ಷಕ್ಕೆ ಸುಮಾರು 15.00 ಲಕ್ಷ ಕಿ.ಮೀ.ಗೂ ಹೆಚ್ಚು ಕ್ರಮಿಸುವುದರಿಂದ ವಾಹನಗಳ ನಿರುಪಯುಕ್ತ ಕಿ.ಮೀ.ನ್ನು ವೃದ್ದಿಸುವುದು ಅಗತ್ಯವಿರುತ್ತದೆ.

f) ಪ್ರಸ್ತುತ ರಸ್ತೆಗಳ ಗುಣಮಟ್ಟವು ಸಹ ಸುಧಾರಣೆಗೊಂಡಿರುವುದರಿಂದ ವಾಹನಗಳ ಕವಚ ಮತ್ತು ತಾಂತ್ರಿಕ ದೋಷಗಳು ಕಡಿಮೆಯಾಗಿರುತ್ತದೆ.

g) ನಿಗಮದಲ್ಲಿ ಒಟ್ಟು 7540 ಸಾಮಾನ್ಯ ವಾಹನಗಳಿದ್ದು, ನಿರುಪಯುಕ್ತಗೊಳಸಲು ನಿಗದಿಪಡಿಸಿರುವ 9.00 ಲಕ್ಷ ಕಿ.ಮೀ. ಕ್ರಮಿಸಿರುವ 4327 (57%) ಮತ್ತು 14.00 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ 968 ಟಾಟಾ, ಲೇಲ್ಯಾಂಡ್ ಮತ್ತು ಐಷರ್ ತಯಾರಿಕೆ ಸಾಮಾನ್ಯ ವಾಹನಗಳು ಕಾರ್ಯಾಚರಣೆಯಲ್ಲಿದ್ದು, ಸದರಿ ವಾಹನಗಳು ಸುಸ್ಥಿತಿಯಲ್ಲಿ ಕಾರ್ಯಚರಣೆ ಮಾಡುತ್ತಿರುವುದರಿಂದ, ಸಾಮಾನ್ಯ ವಾಹನಗಳ ಮತ್ತು ಪ್ರಮುಖ ಜೋಡಣೆಗಳ ನಿರುಪಯುಕ್ತ ಕಿ.ಮೀ.ಅನ್ನು ವೃದ್ದಿಸಲಾಗಿರುತ್ತದೆ.

h) ನಿಗಮದಲ್ಲಿ ಒಟ್ಟು 380 ವೋಲ್ವೋ ವಾಹನಗಳಿದ್ದು, ನಿರುಪಯುಕ್ತಗೊಳಸಲು ನಿಗದಿಪಡಿಸಿರುವ 13.00 ಲಕ್ಷ ಕಿ.ಮೀಟರ್ ಕ್ರಮಿಸಿರುವ 174 (46 %) ವಾಹನಗಳು ಮತ್ತು 14.00 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ 169 ವೋಲ್ವೋ ವಾಹನಗಳಿದ್ದು, ಸುಸ್ಥಿತಿಯಲ್ಲಿ ಕಾರ್ಯಚರಣೆ ಮಾಡುತ್ತಿರುವುದರಿಂದ ವೋಲ್ವೋ ವಾಹನಗಳ ಮತ್ತು ಪ್ರಮುಖ ಜೋಡಣೆಗಳ ನಿರುಪಯುಕ್ತ ಕಿ.ಮೀ. ಅನ್ನು ವೃದ್ಧಿಸಲಾಗಿರುತ್ತದೆ.

i) ನಿಗಮದಲ್ಲಿ ಈಗಾಗಲೇ ನವೀನ ತಾಂತ್ರಿಕತೆಯ ಹೊಸ ಬಿ.ಎಸ್-4 ಮತ್ತು ಬಿ.ಎಸ್-6 ಮಾದರಿ ವಾಹನಗಳು ಸೇರ್ಪಡೆಯಾಗಿದೆ. ಈ ವಾಹನಗಳ ಪ್ರಮುಖ ಸಿಸ್ಟಂಗಳು ಸೆನ್ಸಾರ್ ಮಾದರಿಯಾಗಿದ್ದು, ದೋಷ ಕಂಡುಬಂದಲ್ಲಿ ಕ್ಲಸ್ಟರ್ ಬೋರ್ಡ್‌ನಲ್ಲಿ ಡಿಸ್‌ಪ್ಲೇ ಆಗುವುದರಿಂದ, ದೋಷಗಳನ್ನು ಪ್ರಥಮ ಹಂತದಲ್ಲೇ ನಿವಾರಿಸುವುದರಿಂದ, ಅಸೆಂಬ್ಲಿಗಳ ಜೀವಮಾನವು ವೃದ್ಧಿಯಾಗುತ್ತದೆ. ಉತ್ತಮ ಗುಣಮಟ್ಟದ ಬಿಡಿಭಾಗಗಳು ಆಯಿಲ್, ಕೂಲೆಂಟ್, ಗ್ರೀಸ್ ಸರಬರಾಜು ಮಾಡುತ್ತಿದ್ದು, ರಸ್ತೆಗಳ ಗುಣಮಟ್ಟವು ಸಹ ಉತ್ತಮವಾಗಿರುತ್ತದೆ. ಇದಲ್ಲದೇ ವಾಹನಗಳನ್ನು ಕಾಲಕಾಲಕ್ಕೆ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುತ್ತಿದ್ದು, ಅಸೆಂಬ್ಲಿಗಳ ಪುನಶ್ಚೇತನ ಕಾರ್ಯವನ್ನು ಸಹ ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸುತ್ತಿದ್ದು, ಇದರಿಂದ ಅಸೆಂಬ್ಲಿಗಳ ಜೀವಮಾನವು ಹೆಚ್ಚಾಗುತ್ತಿರುವುದರಿಂದ ಪ್ರಮುಖ ಅಸೆಂಬ್ಲಿಗಳ ನಿರುಪಯುಕ್ತ ಕಿ.ಮೀ. ಅನ್ನು ವೃದ್ಧಿಸಲಾಗಿರುತ್ತದೆ.

**ವಾಹನಗಳನ್ನು ಮತ್ತು ಪ್ರಮುಖ ಜೋಡಣೆಗಳನ್ನು ನಿರುಪಯುಕ್ತಗೊಳಿಸುವ ಕಿ.ಮೀ.ಗಳನ್ನು ಪರಿಷ್ಕರಿಸಿ, ಹೆಚ್ಚಿಸುವ ಹಾಗೂ ನಿರುಪಯುಕ್ತಗೂಳಸಲು ಅಧಿಕಾರ ಪ್ರತ್ಯಾಯೋಜನೆ ನೀಡುವ ಪ್ರಸ್ತಾವನೆಗೆ ಮಂಡಳಿ ಠರಾವು ಸಂಖ್ಯೆ 10377 ದಿನಾಂಕ 14/09/2023 ರಲ್ಲಿ ಅನುಮೋದನೆ ನೀಡಲಾಗಿದೆ.**

1) ವಿವಿಧ ತಯಾರಿಕೆಯ/ಮಾದರಿಯ ವಾಹನಗಳನ್ನು ನಿರುಪಯುಕ್ತಗೊಳಸಲು ನಿಗಧಿಪಡಿಸಿರುವ ಕಿ.ಮೀಟರ್‌ಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಾಹನ ತಯಾರಿಕೆ/ ಮಾದರಿ | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) | ಪರಿಷ್ಕರಿಸಿ, ನಿಗಧಿಪಡಿಸಿರುವ ಕಿ.ಮೀ. /ವರ್ಷ |
|---|---|---|---|
| 1 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಕರ್ನಾಟಕ ಸಾರಿಗೆ, ರಾಜಹಂಸ / ವೈಭವ, ನಾನ್ ಎ.ಸಿ. ಸ್ಲೀಪರ್ ವಾಹನಗಳು (ಮಿಡಿ, ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ) | 9.00 | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 2 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು.(ಕಾರು/ಜೀಪು ಹೊರತುಪಡಿಸಿ) | 9.00 | 9.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 3 | ವೋಲ್ವೋ ನಗರ ಸಾರಿಗೆ ವಾಹನಗಳು | 13.00 | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 4 | ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು | 13.00 | 15.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 5 | ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು | 13.00 | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 6 | ಸ್ಕ್ಯಾನಿಯ ಸೀಟರ್ ವಾಹನಗಳು | ---- | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 7 | ಕರೋನಾ ಎ.ಸಿ. ಮತ್ತು ನಾನ್ ಎ.ಸಿ. ಸ್ಲೀಪರ್ ವಾಹನಗಳು | 11.00 | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |

3) ಲೇಲ್ಯಾಂಡ್, ಟಾಟಾ, ಐಷರ್, ಕರೋನಾ ಮತ್ತು ಇತರೆ ತಯಾರಿಕೆ ವಾಹನಗಳ ಪ್ರಮುಖ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಸಲು ನಿಗಧಿಪಡಿಸಿರುವ ಕಿ.ಮೀಟರ್‌ಗಳು ಈ ಕೆಳಕಂಡಂತಿದೆ.

| ಕ್ರ. ಸಂ | ವಿವರಗಳು | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) ಸುತ್ತೋಲೆ:235/1988 | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) ಸುತ್ತೋಲೆ: 678/2010 | ಪರಿಷ್ಕರಿಸಿ, ನಿಗಧಿಪಡಿಸಿರುವ ಕಿ.ಮೀ. (ಲಕ್ಷಗಳಲ್ಲಿ) |
|---|---|---|---|---|
| 1 | ಇಂಜಿನ್ | Should have undergone reconditioning 6 times. | Engine Should have been covered 6.50 lakh Kms & should have been reconditioned before declaring it as scrapped. OR The OE engine should have been completed more than 8 Lakh Kms without any reconditioning before declaring it as scrapped. | 8.00 ಲಕ್ಷ ಕಿ.ಮೀ. (ರಿ-ಕಂಡೀಷನ್ ಆಗಿರಬೇಕು) ಅಥವಾ ಒರಿಜಿನಲ್ ಇಂಜಿನ್ 9.00 ಲಕ್ಷ ಕಿ.ಮೀ. ಕ್ರಮಿಸಿರಬೇಕು. |
| 2 | ಎಫ್.ಐ.ಪಿ. | 5.00 | - | 6.00 |
| 3 | ಸಿ.ಆರ್.ಡಿ.ಐ. ಹೆಚ್.ಪಿ.ಪಂಪ್ | --- | - | 7.00 |
| 4 | ಏರ್‌ಕಂಪ್ರೆಸರ್ | 3.50 | - | 6.00 |
| 5 | ರೇಡಿಯೇಟರ್ | 3.50 | - | 6.00 |

| | | | | |
|---|---|---|---|---|
| 6 | ಇಂಟರ್‌ಕೂಲರ್ | --- | – | 6.00 |
| 7 | ಟರ್ಬೋಚಾರ್ಜರ್ | ---- | – | 8.00 |
| 8 | ಇಂಜಿನ್ ಇ.ಸಿ.ಯು | ---- | – | 6.00 |
| 9 | ಈಟ್ಸ್ ಸಿಸ್ಟಂ (Exhaust after treatment sys.) | ---- | – | 6.00 |
| 10 | ಗೇರ್ ಬಾಕ್ಸ್ | 5.00 | – | 8.00 |
| 11 | ರಿಟಾರ್ಡರ್ | – | – | 8.00 |
| 12 | ಸೆಲ್ಫ್ ಸ್ಟಾಟರ್ | 4.50 | – | 6.00 |
| 13 | ಆಲ್ಟರ್‌ನೇಟರ್ | 4.50 | – | 8.00 |
| 14 | ರಿಯರ್ ಆಕ್ಸಲ್ ಅಸೆಂಬ್ಲಿ | 5.00 | – | 8.00 |
| 15 | ಎಫ್.ಡಿ.ಎಸ್.ಎಸ್. ಮತ್ತು ಎಫ್.ಡಿ.ಎ.ಎಸ್. | ---- | – | 6.00 |

4) ಪ್ರತಿಷ್ಠಿತ ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ತಯಾರಿಕೆ ವಾಹನಗಳ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಸಲು ನಿಗಧಿಪಡಿಸಿರುವ ಕಿ.ಮೀಟರ್‌ಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಿವರಗಳು | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) ಸುತ್ತೋಲೆ:708/2012 | ಪರಿಷ್ಕರಿಸಿ ನಿಗಧಿಪಡಿಸಿರುವಕಿ.ಮೀ. (ಲಕ್ಷಗಳಲ್ಲಿ) |
|---|---|---|---|
| 1 | ಇಂಜಿನ್ | 10.00 | 11.00 |
| 2 | ಸಿ.ಆರ್.ಡಿ.ಐ. ಹೆಚ್.ಪಿ.ಪಂಪ್/ ಯುನಿಟ್ ಪಂಪ್ | 10.00 | 11.00 |
| 3 | ಏರ್‌ಕಂಪ್ರೇಸರ್ | 10.00 | 11.00 |
| 4 | ಎ.ಸಿ. ಏರ್‌ಕಂಪ್ರೇಸರ್ | --- | 11.00 |
| 5 | ರೇಡಿಯೇಟರ್ | 10.00 | 11.00 |
| 6 | ಇಂಟರ್‌ಕೂಲರ್ | ---- | 11.00 |
| 7 | ಟರ್ಬೋಚಾರ್ಜರ್ | ---- | 9.00 |
| 8 | ಇಂಜಿನ್ ಇ.ಸಿ.ಯು | ----- | 8.00 |
| 9 | ಈಟ್ಸ್ ಸಿಸ್ಟಂ (Exhaust after treatment sys.) | ---- | 8.00 |
| 10 | ಗೇರ್ ಬಾಕ್ಸ್ | 10.00 | 11.00 |
| 11 | ರಿಟಾರ್ಡರ್ | 10.00 | 11.00 |
| 12 | ಸೆಲ್ಫ್ ಸ್ಟಾಟರ್ ಮತ್ತು ಆಲ್ಟರ್‌ನೇಟರ್ | 8.00 | 9.00 |
| 13 | ರಿಯರ್ ಆಕ್ಸಲ್ ಆಸೆಂಬ್ಲಿ | 10.00 | 11.00 |
| 14 | ಏರ್‌ಕಂಡೀಷನರ್ ಸಿಸ್ಟಂ/ಜೋಡಣೆಗಳು | 10.00 | 11.00 |
| 15 | ಎಫ್.ಡಿ.ಎಸ್.ಎಸ್. ಮತ್ತು ಎಫ್.ಡಿ.ಎ.ಎಸ್. | ---- | 6.00 |

ಮೇಲಿನಂತೆ, ವಿವಿಧ ತಯಾರಿಕ/ಮಾದರಿ ವಾಹನಗಳನ್ನು ಹಾಗೂ ಪ್ರಮುಖ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಸಲು ಕಿ.ಮೀಟರ್‌ಗಳನ್ನು ನಿಗಧಿಪಡಿಸಲಾಗಿರುತ್ತದೆ.

<u>ಅನುಸರಿಸಬೇಕಾದ ಕ್ರಮಗಳು:</u>

1. ಒಂದು ವೇಳೆ ವಾಹನಗಳ ಕವಚವನ್ನು ಪುನಶ್ಚೇತನಗೊಳಿಸಿದಲ್ಲಿ (Refurbishing) ತದನಂತರ ಎಲ್ಲಾ ಸಾಮಾನ್ಯ ವಾಹನಗಳು, ರಾಜಹಂಸ, ನಾನ್ ಎ.ಸಿ.ಸ್ಲೀಪರ್ ಮತ್ತು ಪ್ರತಿಷ್ಠಿತ ಹವಾನಿಯಂತ್ರಿತ ವಾಹನಗಳು ಕನಿಷ್ಟ ೩.೦೦ ಲಕ್ಷ ಕಿ.ಮೀ. ಕ್ರಮಿಸಿರಬೇಕು ಅಥಾವ 15 ವರ್ಷ ಪೂರೈಸಿರಬೇಕು.

2. ಪ್ರಮುಖ ಅಸೆಂಬ್ಲಿಗಳು ಮೇಲಿನಂತೆ ನಿಗಧಿತ ಕಿ.ಮೀ.ಗಳನ್ನು ಕ್ರಮಿಸಿದ. ನಂತರ ಸುಸ್ಥಿತಿಯಲ್ಲಿದ್ದಲ್ಲಿ ಉಪಯೋಗಿಸುವುದು. ಈ ಜೋಡಣೆಗಳು ನಿಗಧಿತ ಕಿ.ಮೀ.ಕ್ರಮಿಸಿ. ಅಲ್ಪ ಪ್ರಮಾಣದ ದೋಷವಿದ್ದು ಆರ್ಥಿಕವಾಗಿ ಲಾಭದಾಯಕವಾಗಿದ್ದಲ್ಲಿ ಅವುಗಳನ್ನು ದುರಸ್ಥಿಪಡಿಸಿ, ಬಳಸಿಕೊಳ್ಳುವುದು. ಈ ಬಗ್ಗೆ ಅಸೆಂಬ್ಲಿ ಕಾರ್ಡುಗಳಲ್ಲಿ ಸದರಿ ಮಾಹಿತಿಯನ್ನು ತಪ್ಪದೇ ದಾಖಲಿಸತಕ್ಕದ್ದು.

3. ಅನುಪಯುಕ್ತಗೊಳಿಸಿದ ವಾಹನಗಳಿಗೆ ಅನುಪಯುಕ್ತಗೊಳಿಸಿದ ಅಸೆಂಬ್ಲಿಗಳನ್ನು ಅಳವಡಿಸಿ ಪ್ರಾದೇಶಿಕ ಕಾರ್ಯಾಗಾರಗಳಿಗೆ ರದ್ದತಿಗಾಗಿ ತೆರವುಗೊಳಿಸುವುದು. ನಂತರ ಪ್ರಾದೇಶಿಕ ಕಾರ್ಯಾಗಾರದಲ್ಲಿ ರದ್ದತಿ ವಾಹನಗಳನ್ನು ಮತ್ತು ರದ್ದತಿ ಅಸೆಂಬ್ಲಿಗಳನ್ನು ಪರಿಶೀಲಿಸಿ, ಡಬ್ಲೂ-23 ತಯಾರಿಸಿ, ಮುಂದಿನ ಕ್ರಮಕ್ಕಾಗಿ ಕೇಂದ್ರಕಛೇರಿ ಯಾಂತ್ರಿಕ ಶಾಖೆಗೆ ಕಳುಹಿಸುವುದು. ಯಾವುದೇ ನಿರುಪಯುಕ್ತ ವಾಹನಗಳಿಗೆ ಸ್ಕ್ರಾಪ್ ಅಸೆಂಬ್ಲಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ವಾಹನಗಳನ್ನು ಅಸೆಂಬ್ಲಿರಹಿತವಾಗಿ ತೆರವುಗೊಳಿಸುವ ಬಗ್ಗೆ ಕೇಂದ್ರ ಕಛೇರಿಯಿಂದ ವಿಶೇಷ ಅನುಮತಿ ಪಡೆದುಕೊಳ್ಳುವುದು.

4. ಟಾಟಾ, ಲೇಲ್ಯಾಂಡ್, ಕರೋನಾ ತಯಾರಿಕೆಯ ಎಲ್ಲಾ ಮಾದರಿಯ ವಾಹನಗಳ ಅಸೆಂಬ್ಲಿಗಳನ್ನು ರದ್ದುಪಡಿಸುವ ಅಧಿಕಾರದ ಬಗ್ಗೆ ಈ ಹಿಂದೆ ಸುತ್ತೋಲೆ ಸಂಖ್ಯೆ: 235/1988 ರಲ್ಲಿ ತಿಳಿಸಿರುವಂತೆ ಕಾರ್ಯ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಾಗಾರರವರಿಗೆ ಲೇಲ್ಯಾಂಡ್, ಟಾಟಾ ಜೊತೆಗೆ ಐಷರ್ ತಯಾರಿಕೆಯ ಇಂಜಿನ್, ಎಫ್.ಐ.ಪಿ. ಗಳನ್ನು ರದ್ದುಗೊಳಿಸುವ ಅಧಿಕಾರದ ಜೊತೆಗೆ, ಈ ಎಲ್ಲಾ ತಯಾರಿಕೆಗಳ ಏರ್ ಕಂಪ್ರೇಸರ್, ಟರ್ಬೋಚಾರ್ಜರ್, ಸಿ.ಆರ್.ಡಿ.ಐ./ಹೆಚ್.ಪಿ.ಪಂಪ್, ಈಟ್ಸ್ ಸಿಸ್ಟಂ, ರಿಟಾರ್ಡರ್ ಮತ್ತು ಇಂಜಿನ್ ಇ.ಸಿ.ಯು. ಗಳನ್ನು ರದ್ದುಗೊಳಿಸುವ ಅಧಿಕಾರವನ್ನು ನೀಡಲಾಗಿದೆ. (ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ವಾಹನಗಳ ಅಸೆಂಬ್ಲಿಗಳನ್ನು ಹೊರತುಪಡಿಸಿ)

5. ಮುಂದುವರೆದಂತೆ, ಟಾಟಾ, ಲೇಲ್ಯಾಂಡ್, ಐಷರ್, ಕರೋನಾ ತಯಾರಿಕೆಯ ಎಲ್ಲಾ ಮಾದರಿಯ ವಾಹನಗಳ ಹಾಲಿ ಅಸೆಂಬ್ಲಿ ಕಾರ್ಡ್‌ಗಳಿರುವ ರೇಡಿಯೇಟರ್, ಗೇರ್‌ಬಾಕ್ಸ್, ಸೆಲ್ಫ್ ಸ್ಟಾಟರ್, ಅಲ್ಟರ್‌ನೇಟರ್, ರಿಯರ್ ಆಕ್ಸಲ್ ಅಸೆಂಬ್ಲಿ, ಟೈರು ಮತ್ತು ಬ್ಯಾಟರಿ ಹಾಗೂ ಈ ಸುತ್ತೋಲೆಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ವಾಹನಗಳಲ್ಲಿ ಅಳವಡಿಸಿರುವ ಅಸೆಂಬ್ಲಿಗಳಾದ ಇಂಟರ್‌ಕೂಲರ್, ಎಫ್.ಡಿ.ಎಸ್.ಎಸ್. (Fire detection and Suppression System) ಮತ್ತು ಎಫ್.ಡಿ.ಎ.ಎಸ್. (Fire detection and Alaram System) ಗಳನ್ನು ರದ್ದುಪಡಿಸುವ ಅಧಿಕಾರವನ್ನು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ನೀಡಲಾಗಿದ್ದು, ವಿ.ಯಾಂ.ಅಭಿಯಂತರರ ದೃಡಿಕರಣದ ನಂತರ ರದ್ದತಿ ಪ್ರಕ್ರಿಯೆಗೆ ಒಳಪಡಿಸುವುದು. (ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ವಾಹನಗಳ ಅಸೆಂಬ್ಲಿಗಳನ್ನು ಹೊರತುಪಡಿಸಿ)

6. ಪ್ರತಿಷ್ಠಿತ ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ವಾಹನಗಳ ಎಲ್ಲಾ ಅಸೆಂಬ್ಲಿಗಳನ್ನು ವಿಭಾಗಗಳಿಂದ ದೃಡಿಕರಣಗೊಂಡ ನಂತರ (ಟೈರುಗಳನ್ನು ಹೊರತುಪಡಿಸಿ) ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸುವ ಅಧಿಕಾರವು ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/ಮುಖ್ಯ ಯಾಂತ್ರಿಕ ಅಭಿಯಂತರರು ಕೇಂದ್ರ ಕಛೇರಿರವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

7. ಮೇಲೆ ತಿಳಿಸಿರುವ ಹೊಸದಾಗಿ ಸೇರ್ಪಡಿಸಿರುವ ಅಸೆಂಬ್ಲಿಗಳಿಗೆ ತಪ್ಪದೇ ಅಸೆಂಬ್ಲಿ ಕಾರ್ಡ್‌ಗಳನ್ನು ಹೊಸದಾಗಿ ತೆರದು, ಹಾಲಿ ವಾಹನದಲ್ಲಿ ಕ್ರಮಿಸಿರುವ ಕಿ.ಮೀ. ಗಳನ್ನು ದಾಖಲಿಸಿ, ಮುಂದಿನ ಪ್ರಗತಿ ಕಿ.ಮೀ.ಗಳನ್ನು ಬರೆದು, ಕಿ.ಮೀ. ಗಳನ್ನು ಕಡ್ಡಾಯವಾಗಿ ದಾಖಲಿಸುವುದು.

8. ನಿಗಧಿಪಡಿಸಿರುವ ನಿರುಪಯುಕ್ತ ಕಿ.ಮೀ. ಕ್ರಮಿಸಿರುವ/15 ವರ್ಷ ಪೂರೈಸಿರುವ ಎಲ್ಲಾ ತಯಾರಿಕೆಯ/ ಮಾದರಿಯ ವಾಹನಗಳನ್ನು ನಿರುಪಯುಕ್ತಗೊಳಿಸುವ ಅಧಿಕಾರವು ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) / ಮುಖ್ಯ ಯಾಂತ್ರಿಕ ಅಭಿಯಂತರರು ರವರಿಗಿರುತ್ತದೆ. ನಿಗಧಿತ ಕಿ.ಮೀ. ಕ್ರಮಿಸದ ಹಾಗೂ 15 ವರ್ಷ ಪೂರೈಸದ ವಾಹನಗಳನ್ನು ನಿರುಪಯುಕ್ತಗೊಳಸಬೇಕಾದಂತಹ ವಿಶೇಷ ಪ್ರಕರಣಗಳ ಅಧಿಕಾರವು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ ರವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬಂದಿದ್ದು, ಈ ಸುತ್ತೋಲೆಯು ತಲುಪಿದಕ್ಕೆ ಸ್ವೀಕೃತಿಯನ್ನು ಕಳುಹಿಸುವುದು.

(ಎನ್.ಕೆ.ಬಸವರಾಜು)
**ಮುಖ್ಯ ಯಾಂತ್ರಿಕ ಅಭಿಯಂತರರು**

ರವರಿಗೆ,
**ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿ,**
**ಕ.ರಾ.ರ.ಸಾ.ನಿಗಮ.**

<u>ಪ್ರತಿಯನ್ನು:</u>

1. ಹಿರಿಯ ಆಪ್ತ ಕಾರ್ಯದಶಿಗಳು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಹಿರಿಯ ಆಪ್ತ ಕಾರ್ಯದಶಿಗಳು, ಮಾನ್ಯ ನಿರ್ದೇಶಕರು (ಸಿ ಮತ್ತು ಜಾ) ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಎಲ್ಲಾ ಇಲಾಖಾ ಮುಖ್ಯಸ್ಥರು/ ಉಸ್ತುವಾರಿ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿ ಮತ್ತು ಅಗತ್ಯ ಕ್ರಮಗಳಗಾಗಿ ಕಳುಹಿಸಲಾಗಿದೆ.
5. ಮುಖ್ಯ ಯಾಂತ್ರಿಕ ಅಭಿಯಂತರರು, ಬೆಂ.ಮ.ನ.ಸಾ.ಸಂ., ಕ.ಕ.ರ.ಸಾ.ಸಂ. ಮತ್ತು ವಾ.ರ.ಸಾ.ಸಂ. ರವರ ಮಾಹಿತಿಗಾಗಿ.
6. ಹಿ/ಕಾರ್ಯ ವ್ಯವಸ್ಥಾಪಕರು/ಕ.ರಾ.ರ.ಸಾ.ನಿಗಮ, ಬೆಂಗಳೂರು/ಹಾಸನ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಪ್ರಾಂಶುಪಾಲರು, ಎಲ್ಲಾ ತರಬೇತಿ ಕೇಂದ್ರ, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ.
8. ಎಲ್ಲಾ ವಿಭಾಗೀಯ ಯಾಂತ್ರಿಕ ಅಭಿಯಂತರರು, ಕ.ರಾ.ರ.ಸಾ.ನಿಗಮ ರವರ ಮಾಹಿತಿ ಮತ್ತು ಅಗತ್ಯ ಕ್ರಮಗಳಗಾಗಿ.
9. ಎಲ್ಲಾ ಹಿ/ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.